## ನಿಮ್ಮೊಡನೆ

# ಕೊನೆಗೊಳ್ಳದ ಬಾಲ್ಯವಿವಾಹ ಬದಲಾಗದ ಮನೋಭಾವ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 578 ಅಪ್ರಾಪ್ತ ವಯಸ್ಸಿನ ಗರ್ಭಿಣಿಯರು 2018–2019ರಲ್ಲಿ ಪತ್ತೆಯಾಗಿರುವುದು ರಾಜ್ಯದಲ್ಲಿ ಬಾಲ್ಯವಿವಾಹ ದೊಡ್ಡ ಪ್ರಮಾಣದಲ್ಲೇ ಜೀವಂತವಾಗಿರುವುದಕ್ಕೆ ಉದಾಹರಣೆ. ಜಿಲ್ಲಾಸ್ಪತ್ರೆಯಿಂದ ಪಡೆದಿರುವ 'ತಾಯಿ ಕಾರ್ಡ್' ದಾಖಲೆಗಳಿಂದ ಈ ಆಘಾತಕಾರಿ ಅಂಕಿಅಂಶ ಬಯಲಿಗೆ ಬಂದಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರಬಹುದಾದವರು ಹಾಗೂ ಮದುವೆಯಾಗಿಯೂ ಗರ್ಭ ಧರಿಸದವರ ಲೆಕ್ಕವನ್ನೂ ಊಹಿಸಿಕೊಂಡರೆ ಅಪ್ರಾಪ್ತ ವಿವಾಹಿತರ ಸಂಖ್ಯೆ ಮತ್ತಷ್ಟು ದೊಡ್ಡದಾಗಿರುವುದರಲ್ಲಿ ಅನುಮಾನವಿಲ್ಲ. ಪ್ರಸಕ್ತ ಮೇ ತಿಂಗಳಲ್ಲೇ ಹುಬ್ಬಳ್ಳಿ ಜಿಲ್ಲೆಯ ಚನ್ನಾಪುರ ಎನ್ನುವ ಗ್ರಾಮದಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹವೊಂದನ್ನು ಅಧಿಕಾರಿಗಳು ತಡೆದಿದ್ದಾರೆ. ರಾಯಚೂರು ಹಿಲ್ಲೆಯ ಹಟ್ಟಿ ಚಿನ್ನದಗಣಿಯ ಜತ್ತಿ ಕಾಲೊನಿ ಹಾಗೂ ಬಂಡೇಬಾವಿ ಗ್ರಾಮಗಳಲ್ಲಿ ಮದುವೆ ನಿಷ್ಕರ್ಷೆಯಾಗಿದ್ದ ಮೂವರು ಬಾಲಕಿಯರನ್ನು ರಕ್ಷಿಸಲಾಗಿದೆ. ಇವೆಲ್ಲ ಪ್ರಕರಣಗಳನ್ನು ನೋಡಿದರೆ ರಾಜ್ಯದಲ್ಲಿ ಬಾಲ್ಯವಿವಾಹಗಳು ಗಣನೀಯ ಪ್ರಮಾಣದಲ್ಲೇ ನಡೆಯುತ್ತಿರುವುದು ಸ್ಪಷ್ಟ. ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆಯೂ ಹೆಚ್ಚುತ್ತಿದೆ. ಧಾರವಾಡ ಜಿಲ್ಲೆಯ ಉದಾಹರಣೆ ನೋಡಿ. ಎರಡು ವರ್ಷಗಳ ಹಿಂದೆ ಧಾರವಾಡ ಜಿಲ್ಲೆಯಲ್ಲಿ 265 ಅಪ್ರಾಪ್ತ ಹೆಣ್ಣುಮಕ್ಕಳು ಗರ್ಭಿಣಿಯರಾಗಿದ್ದ ವಿಷಯ ವರದಿಯಾಗಿತ್ತು. 2015ರಲ್ಲಿ ಈ ಸಂಖ್ಯೆ 185ರಷ್ಟಿತ್ತು.

ಬಾಲ್ಯವಿವಾಹ ತಡೆಗೆ ಕಟ್ಟುನಿಟ್ಟಿನ ಕಾನೂನಿದೆ. 1929ರ ಬಾಲ್ಯವಿವಾಹ ನಿಷೇಧ ಕಾಯ್ದೆಗೆ 2006ರಲ್ಲಿ ತಿದ್ದುಪಡಿ ತರಲಾಗಿದ್ದು, ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು 14ರಿಂದ 18 ವರ್ಷಕ್ಕೆ ಹಾಗೂ ಗಂಡಿನ ವಯಸ್ಸನ್ನು 18ರಿಂದ 21ಕ್ಕೆ ಏರಿಸಲಾಗಿತ್ತು. ಈ ಕಾಯ್ದೆಯನ್ನು ಜಾರಿಗೆ ತರುವುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಮುಖ ಕರ್ತವ್ಯಗಳಲ್ಲೊಂದು. ಇಲಾಖೆಯ ಜೊತೆಗೆ ಪೊಲೀಸ್ ಹಾಗೂ ಮಕ್ಕಳ ಕಲ್ಯಾಣ ಸಮಿತಿ ಸೇರಿದಂತೆ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿ ಬಾಲ್ಯ ವಿವಾಹ ನಡೆಸಲು ಮುಂದಾದವರ ಬಗ್ಗೆ ಮಾಹಿತಿ ಸಂಗ್ರಹಿಸುವ ಹಾಗೂ ಪೋಷಕರಿಗೆ ತಿಳಿಹೇಳುವ, ಅಂತಿಮವಾಗಿ ಕಾನೂನುಕ್ರಮ ಕೈಗೊಳ್ಳುವ ಕೆಲಸ ಮಾಡುತ್ತದೆ. ಆದರೆ, ಈ ಕಾವಲುಸಮಿತಿಯ ಕಣ್ತಪ್ಪಿಸಿ ಎಳೆಯರ ಮದುವೆಗಳು ನಡೆಯುತ್ತಲೇ ಇವೆ. ಕೆಲವೊಂದು ಸಂದರ್ಭಗಳಲ್ಲಿ ಅಧಿಕಾರಿಗಳು ಕೂಡ ಜಾಣಕುರುಡಿನಿಂದ ವರ್ತಿಸುವುದಿದೆ.

ಗರ್ಭ ಧರಿಸಿದ ಬಾಲಕಿಯ ವಯಸ್ಸು 18 ವರ್ಷಕ್ಕೂ ಕಡಿಮೆಯಿದ್ದರೆ ಕುಟುಂಬ ಸದಸ್ಯರ ವಿರುದ್ಧ 'ಬಾಲ್ಯವಿವಾಹ ನಿಷೇಧ ಕಾಯ್ದೆ'ಯಡಿ ಪ್ರಕರಣ ದಾಖಲಿಸಬಹುದು. ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ ತಡೆಗಟ್ಟುವ 'ಪೋಕ್ಸೊ' ಕಾಯ್ದೆಯಡಿ ಅಪ್ರಾಪ್ತ ಹುಡುಗಿಯ ಪತಿಯ ಮೇಲೆ ಪ್ರಕರಣ ದಾಖಲಿಸಲಿಕ್ಕೆ ಅವಕಾಶವಿದೆ. ಆದರೆ ಇವೆಲ್ಲ ಕಾನೂನುಗಳು ಬಹಳಷ್ಟು ಸಂದರ್ಭಗಳಲ್ಲಿ ಬೆದರುಗೊಂಬೆಗಳಾಗಿಯೇ ಉಳಿದಿವೆ. ಇಂಥ ಮದುವೆಗಳಿಗೆ ಮಕ್ಕಳ ಪೋಷಕರೇ ಬೆಂಬಲವಾಗಿ ನಿಲ್ಲುವುದು ಕಾನೂನಿಗೆ ಕಗ್ಗಂಟಾಗಿ ಪರಿಣಮಿಸಿದೆ.

ಅಪ್ರಾಪ್ತ ವಯಸ್ಕರ ಮದುವೆಗಳು ಹೆಚ್ಚು ನಡೆಯುತ್ತಿರುವ ಭಾರತದ ರಾಜ್ಯಗಳಲ್ಲಿ ತಮಿಳುನಾಡು, ಪಶ್ಚಿಮ ಬಂಗಾಳಗಳ ಜೊತೆಗೆ ಕರ್ನಾಟಕ ಕೂಡ ಮುಂಚೂಣಿಯಲ್ಲಿದೆ. ಅಂಕಿಅಂಶವೊಂದರ ಪ್ರಕಾರ, ರಾಜ್ಯದಲ್ಲಿ ಶೇ. 23.2 ಮಕ್ಕಳು ಬಾಲ್ಯವಿವಾಹಕ್ಕೆ ಒಳಗಾಗುತ್ತಿದ್ದು, ಈ ಪ್ರಮಾಣ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಾಗಿದೆ. 'ಯುನಿಸೆಫ್' ದತ್ತಾಂಶಗಳ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಸುಮಾರು 15 ಲಕ್ಷ ಬಾಲಕಿಯರನ್ನು ಹದಿನೆಂಟು ವರ್ಷಕ್ಕೆ ಮೊದಲೇ ಮದುವೆಯ ವ್ಯವಸ್ಥೆಗೆ ದೂಡಲಾಗುತ್ತಿದೆ. ಸಮಾಧಾನದ ಸಂಗತಿಯೆಂದರೆ, ಕಳೆದ ದಶಕಕ್ಕೆ ಹೋಲಿಸಿದರೆ ಬಾಲ್ಯವಿವಾಹಗಳ ಪ್ರಮಾಣ ಶೇ. 42ರಿಂದ ಶೇ. 27ಕ್ಕೆ ಕುಸಿದಿರುವುದು.

ಬಾಲ್ಯವಿವಾಹಗಳ ಹಿಂದೆ ಸಾಮಾಜಿಕ ಕಾರಣಗಳಿರುವಂತೆಯೇ ಆರ್ಥಿಕ ಕಾರಣಗಳೂ ಇವೆ. ಮಗಳ ಮದುವೆ ಮಾಡುವುದು ಪೋಷಕರ ಪಾಲಿಗೆ ಜೀವಮಾನದ ಸವಾಲುಗಳಲ್ಲೊಂದು ಎನ್ನುವ ಸಾಮಾಜಿಕ ಸ್ಥಿತಿಯಲ್ಲಿ ಈಗಲೂ ಹೆಚ್ಚಿನ ಬದಲಾವಣೆಯೇನೂ ಆಗಿಲ್ಲ. ಹುಡುಗಿಯ ವಯಸ್ಸು–ವಿದ್ಯಾರ್ಹತೆ ಹೆಚ್ಚಾಗುತ್ತಾ ಹೋದಂತೆ ಗಂಡು ಸಿಗುವುದು ಕಷ್ಟ ಎನ್ನುವ ಮನೋಭಾವವೂ ಇದೆ. ಹೆಣ್ಣುಮಕ್ಕಳ ಸುರಕ್ಷತೆಯ ವಿಷಯವನ್ನು ಉಡಿಯಲ್ಲಿನ ಕೆಂಡದಂತೆ ಭಾವಿಸುವವರೂ ಇದ್ದಾರೆ. ಇವೆಲ್ಲ ಕಾರಣಗಳಿಂದಾಗಿ ಮಗಳ ಮದುವೆಯನ್ನು ಆದಷ್ಟೂ ಬೇಗ ಮಾಡಿ ಕೈತೊಳೆದುಕೊಳ್ಳಲು ಹಂಬಲಿಸುವ ಪೋಷಕರು ದೊಡ್ಡ ಪ್ರಮಾಣದಲ್ಲೇ ಇದ್ದಾರೆ. ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸಲಿಕ್ಕಾಗಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆ ಕಾರ್ಯಕ್ರಮಗಳ ನಂತರವೂ ಹೆಣ್ಣುಮಕ್ಕಳ ಜವಾಬ್ದಾರಿಯನ್ನು ಮದುವೆಯ ಮೂಲಕ ವರ್ಗಾಯಿಸಬಯಸುವ ಸಮಾಜದ ಧೋರಣೆಯಲ್ಲಿ ಹೆಚ್ಚಿನ ವ್ಯತ್ಯಾಸವಾಗಿಲ್ಲ. ಬಾಲಕಿಯರನ್ನು ಕೇಂದ್ರೀಕರಿಸಿದ ಶಿಕ್ಷಣ ವ್ಯವಸ್ಥೆ ಹಾಗೂ ಪೋಷಕರಿಗೆ ಅರಿವು ನೀಡುವ ಕಾರ್ಯಕ್ರಮಗಳ ಜೊತೆಗೆ, ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬಗ್ಗೆ ಸಮಾಜ–ಸರ್ಕಾರ ಹೆಚ್ಚಿನ ಮುತುವರ್ಜಿ ವಹಿಸಬೇಕಾದ ಅಗತ್ಯವಿದೆ.

■ **ರಘುನಾಥ ಚ.ಹ.**

**ಮಗಳ ಮದುವೆ ಮಾಡುವುದು ಪೋಷಕರ ಪಾಲಿಗೆ ಜೀವಮಾನದ ಸವಾಲುಗಳಲ್ಲೊಂದು ಎನ್ನುವ ಸಾಮಾಜಿಕ ಸ್ಥಿತಿಯಲ್ಲಿ ಈಗಲೂ ಹೆಚ್ಚಿನ ಬದಲಾವಣೆಯೇನೂ ಆಗಿಲ್ಲ. ಹುಡುಗಿಯ ವಯಸ್ಸು–ವಿದ್ಯಾರ್ಹತೆ ಹೆಚ್ಚಾಗುತ್ತಾ ಹೋದಂತೆ ಗಂಡು ಸಿಗುವುದು ಕಷ್ಟ ಎನ್ನುವ ಮನೋಭಾವವೂ ಇದೆ.**



ಈಶ್ವರ